quickmarketreports.com Date : 01-10-2015

# ಮೊಜಾಂಬಿಕ್ ಮತ್ತು ಗ್ವಿನಿಯಾ ಬಿಸಾವ್ರೊ ಗೋಡಂಬಿ ಕ್ಷೇತ್ರದಲ್ಲಿ ಪರಸ್ಪರ ಸಹಕಾರ

ಮೊಜಾಂಬಿಕ್ ಮತ್ತು ಗ್ವಿನಿಯಾ ಬಿಸಾವ್ರೋದ ಪ್ರತಿನಿಧಿಗಳು ಮಾತುಕತೆಯಲ್ಲಿ ಗೋಡಂಬಿ ಕ್ಷೇತ್ರದಲ್ಲಿ ಪರಸ್ಪರ ಸಹಕಾರದ ನಿರ್ಧಾರ ಮಾಡಿವೆ. ಆಫ್ರಿಕಾದ ಎರಡನೇ ಅತೀ ಹೆಚ್ಚು ಗೋಡಂಬಿ ಬೆಳೆಯುವ ಗ್ವಿನಿಯಾ ಬಿಸಾವ್ರೊ ಮೊಜಾಂಬಿಕ್‌ನಲ್ಲಿನ ಗೋಡಂಬಿ ಸಂಸ್ಕರಣೆಯ ಅನುಭವವನ್ನು ಹಂಚಿಕೊಂಡಿದೆ ಮತ್ತು ಸಂಸ್ಕರಣೆಯಲ್ಲಿ ಅದರ ಜ್ಞಾನವನ್ನು ಬಯಸಿದೆ. ಆಫ್ರಿಕಾವು ಜಾಗತಿಕ ಮಾರಾಟವಾಗುವ ಅರ್ಧದಷ್ಟು ಕಚ್ಚಾಗೋಡಂಬಿ ಉತ್ಪಾದಿಸುತ್ತಿದ್ದು ಅದರಲ್ಲಿ ಶೇಕಡಾ 10ರಷ್ಟು ಮಾತ್ರ ಸ್ಥಳೀಯವಾಗಿ ಸಂಸ್ಕರಣೆ ಮಾಡಲಾಗುತ್ತಿದೆಯೆಂದು ಮೊಜಾಂಬಿಕ್‌ನ ಕ್ಯಾಶ್ಯೂ ಪ್ರೊಮೋಶನ್ ಇನ್‌ಸ್ಟಿಟ್ಯೂಟ್‌ನ ಡೈರೆಕ್ಟರ್ ಫಿಲೋಮಿನಾ ಮೈಯೋಷ್ಟೆ ಹೇಳಿದ್ದಾರೆ. ಉದ್ಯೋಗ ಮತ್ತು ಆದಾಯ ಹೆಚ್ಚಿಸಲು ಗೋಡಂಬಿಯ ಸ್ಥಳೀಯ ಸಂಸ್ಕರಣೆ ಹೆಚ್ಚಳಗೊಳಿಸುವುದು ಅವಶ್ಯಕವಾಗಿದೆಯೆಂದು ಅವರು ಹೇಳಿದರು. 2014–15ರಲ್ಲಿ ಮೊಜಾಂಬಿಕ್ ಕಚ್ಚಾಗೋಡಂಬಿ ಉತ್ಪಾದನೆಯನ್ನು 1 ಲಕ್ಷ ಟನ್‌ಗಳಿಗೇರಿಸುವ ಗುರಿಯಿರಿಸಿಕೊಂಡಿದ್ದು, ಇದು ಹಿಂದಿನ ವರ್ಷಕ್ಕಿಂತ 20000 ಟನ್ ಅಧಿಕವಾಗಿದೆ, ಆದರೆ ಈ ಹಿಂದೆ 1970ರಲ್ಲಿ ಉತ್ಪಾದಿಸುತ್ತಿದ್ದ 2 ಲಕ್ಷ ಟನ್‌ಗಳ ಅರ್ಧಾಂಶ ಮಾತ್ರವಾಗಿದೆಯೆನ್ನಲಾಗಿದೆ. ಅಂತರಾಷ್ಟ್ರೀಯ ಸಮ್ಮೇಳನಗಳು ಸಂಶೋಧನೆ, ಉತ್ಪಾದನೆ, ಮಾರುಕಟ್ಟೆಗಳ ತಿಳುವಳಿಕೆಯ ಅತ್ಯುತ್ತಮ ಸಂವಹನ ಕೇಂದ್ರವಾಗಿದೆಯೆಂದು ಅವರು ಹೇಳಿದರು.